ಇದ್ದಾನೆ. ಇವರೆಲ್ಲರೂ ಮುಂಬೈನ ವಾಣಿಜ್ಯ ವ್ಯವಸ್ಥೆಯಲ್ಲಿ ತಮ್ಮ ದೇಣಿಗೆಯನ್ನು ನೀಡುತ್ತಿದ್ದಾರೆ. ಕಷ್ಟಪಟ್ಟು ದುಡಿದು ತಮ್ಮ ಜೀವನವನ್ನು ನಡೆಸುತ್ತಿದ್ದಾರೆ. ಆದರೂ ನೈತಿಕತೆಯ ಪರೀಕ್ಷೆಯನ್ನು ಪಾಸುಮಾಡಬಹುದಾದ ಅವರ ಕಾಯಕ ಮತ್ತು ಜೀವನ ಕಾನೂನಿನ ಪರಿಧಿಯಲ್ಲಿಲ್ಲ. ಸರ್ಕಾರವೇ ಜನರಿಗೆ ವಸತಿ ಕಲ್ಪಿಸಿದರೆ ಅದು ಸಂಕ್ಷೇಮ ಕಾರ್ಯಕ್ರಮ. ಅದೊಂದು ಆವಾಸ್ ಯೋಜನಾ. ಅದೇ ಜನ ಆತ್ಮನಿರ್ಭರ್ ಆಗಿ ಸ್ವಂತ ಮನೆಗಳನ್ನು ಕಟ್ಟಿ ಜೀವನ ನಡೆಸಲು ಪ್ರಯತ್ನಿಸಿದರೆ ಅದಕ್ಕೆ ಜೆಸಿಬಿಯ ಮದ್ದು... ಕಾನೂನಿನ ಪ್ರಶ್ನೆಗೆ ನೈತಿಕ ಉತ್ತರವಿಲ್ಲ ಎನ್ನುವುದನ್ನು ಈ ಪುಸ್ತಕದಲ್ಲಿರುವ ಅನೇಕ ಕಾಯಕಗಳು ನಿರೂಪಿಸಿ ತೋರಿಸುತ್ತವೆ.

ಒಂದು ಮಹಾನಗರವು ಸುಗಮವಾಗಿ ನಡೆಯಲು ಮನರಂಜಕರು ಬೇಕು, ಪಾರ್ಟಿಯ ಸಂಭ್ರಮಕ್ಕೆ ಹಾಡು ಕುಣಿತವನ್ನು ಏರ್ಪಾಟು ಮಾಡುವವರು ಬೇಕು. ಮಕ್ಕಳಾಗದಿರುವ ದಂಪತಿಗಳಿಗೆ ಬಾಡಿಗೆಗೆ ಒಂದು ಗರ್ಭಕೋಶ ಬೇಕು. ಕಟ್ಟಡ ಕಟ್ಟುವವರಿಗೆ ಕೂಲಿಗಳು ಬೇಕು. ಕೊಳೆಗೇರಿಗಳಲ್ಲಿ ವಾಸಿಸುವವರ ಶೌಚಕ್ಕೆ ಬಾಡಿಗೆ ಶೌಚಾಲಯ ಬೇಕು, ನ್ಯಾಯಾಲಯದಲ್ಲಿ ಕೇಸುಗಳನ್ನು ವಾದಿಸಲು ಬಾಡಿಗೆ ಸಾಕ್ಷಿಗಳು ಬೇಕು, ಶಬ್ದಮಾಲಿನ್ಯದ ವಿರುದ್ಧ ಹೋರಾಡುವ ಆಕ್ಟಿವಿಸ್ಟುಗಳು ಬೇಕು, ಇಲೆಕ್ಟ್ರಾನಿಕ ತ್ಯಾಜ್ಯವನ್ನು ಸಂಸ್ಕರಿಸಿ ಅದರಲ್ಲಿನ ಘಾತಕ ಪದಾರ್ಥಗಳನ್ನು ಬೇರ್ಪಡಿಸುವ ಪರಿಣತರು ಬೇಕು, ಸಿನಿಮಾ ತಯಾರಿಸುವವರಿಗೆ ತಮ್ಮ ಮಾಯಾನಗರಿಯನ್ನು – ಒಂದು ಪರ್ಯಾಯ ಸತ್ಯವನ್ನು ನಿರ್ಮಿಸಲು ಕನಸಿನಲೋಕ ಬೇಕು... ಒಂದು ನಗರದ ಅವಶ್ಯಕತೆಗಳೇನಿರಬಹುದು, ಅದನ್ನು ಒದಗಿಸಿಕೊಡುವವರು ಯಾರು, ಮತ್ತು ಎಲ್ಲಿದ್ದಾರೆ ಎಂದು ಊಹಿಸಿದಾಗ ಈ ಪುಸ್ತಕದ ನಾನ್ನೂರೈವತ್ತು ಪುಟಗಳು ಸಾಲದು ಎನ್ನಿಸುತ್ತದೆ.




ನಾನು ಅನೇಕ ವರ್ಷಗಳ ಕಾಲ ದೂರದ ಗುಜರಾತಿನಲ್ಲಿದ್ದೆ. ನಮ್ಮ ಪಕ್ಕದ ಮನೆಯಲ್ಲಿ ಬಂಗಾಲದಿಂದ ಬಂದಿದ್ದ (ಆಗ ಇನ್ನು ಮದುವೆಯಾಗದೇ ಒಂಟಿಯಾಗಿದ್ದ) ಮುಖರ್ಜಿಯಿದ್ದ. ವಾರಕ್ಕೆರಡು ಬಾರಿ, ಮನೆಗೆ ಬೆಂಗಾಲಿ ಊಟ ಬೇಕು – ಯಾರಾದರೂ ಕ್ಯಾರಿಯರ್ ಕಳುಹಿಸಬಹುದೇ ಅನ್ನುವ ಅವನ ಸರಳ ಪ್ರಶ್ನೆಗೆ ಉತ್ತರ ‘ಹೋ ಜಾಯೇಗಾ’. ತದನಂತರ ಎರಡೇ ದಿನಗಳಲ್ಲಿ ವಾರಕ್ಕೆರಡು ಬಾರಿ ಅವನಿಗೆ ಕ್ಯಾರಿಯರ್‌ನಲ್ಲಿ ಬಂಗಾಲಿ ಊಟದ ಸರಬರಾಜಾಗುತ್ತಿತ್ತು. ಈಗಾಗಲೇ ಇದ್ದ ಏರ್ಪಾಟಿನಲ್ಲಿ ಒಬ್ಬ ಗ್ರಾಹಕನಾಗಿ ಮುಖರ್ಜಿ ಸೇರಿದನೋ, ಅಥವಾ ಅವನು ಕೇಳಿದ್ದರಿಂದಾಗಿ ಈ ವ್ಯಾಪಾರ ಪ್ರಾರಂಭವಾಗಿ ವ್ಯಾಪಕವಾಗಿ ಹಬ್ಬಿತೋ ತಿಳಿಯದು. ಆದರೆ, ಅಲ್ಲಿಂದಾಗಿ ಅದರ ವ್ಯಾಪಕತೆ ವಿಸ್ತಾರವಾದದ್ದಂತೂ ನಿಜ. ಹೀಗೇ ಹಿಂದೆಂದೋ ಯಾರೋ ಇಡ್ಲಿ–ದೋಸೆ ಹಿಟ್ಟಿನ ಪ್ರಶ್ನೆಯನ್ನೂ ಕೇಳಿರಬೇಕು. ಆದ್ದರಿಂದಲೇ ನನಗೆ ಆ ಸೇವೆ ಸರಳವಾಗಿ ಪ್ರಾಪ್ತವಾಗಿತ್ತು. ಈ ರೀತಿಯ ನಾವು ಊಹಿಸಲಾಗದ ವಿಭಿನ್ನ ಸೇವೆಗಳಿವೆ. ಅದನ್ನೆಲ್ಲ ಒದಗಿಸಿಕೊಡುವ ಅಸೀಮ ಸಾಧ್ಯತೆಗಳನ್ನು ‘ಬಾಂಬೆ ಬ್ರೋಕರ್ಸ್’ ದಾಖಲಿಸಿದೆ. ಬುದ್ಧಿವಂತ ಸಾಫ್ಟ್‌ವೇರ್ ಇಂಜಿನಿಯರುಗಳು ಈ ಬ್ರೋಕರುಗಳನ್ನು ಒಂದೆಡೆ ಸೇರಿಸುವ ‘ಆ್ಯಪ್’ ತಯಾರಿಸುವ ಒಂದು ಸ್ಟಾರ್ಟಪ್ ಅನ್ನು ಪ್ರಾರಂಭಿಸಿದರೂ ನನಗೆ ಆಶ್ಚರ್ಯವಿಲ್ಲ. ಎಷ್ಟರ ಮಟ್ಟಿಗೆ ಇದನ್ನು ಕಾನೂನಿನ ಪರಿಧಿಯಲ್ಲಿ ಪರಿಗಣಿಸುತ್ತೇವೆ ಮತ್ತು ಎಷ್ಟು ಇದು ನೈತಿಕತೆಯ ನೆಲೆಯ ಮೇಲೆ ನಿಲ್ಲುತ್ತದೆ ಎನ್ನುವುದಷ್ಟೇ ಪ್ರಶ್ನೆ. ●